# ನಿರ್ಲಿಪ್ತತೆ



ಈ ಸಂಸಾರದಲ್ಲಿ ನಿರ್ಲಿಪ್ತರಾಗಿ ಇರುವುದು ಎಂದರೆ ಬಹಳ ಕಠಿಣ. ಒಮ್ಮೆ ಪ್ರತಾಪ ಚಂದ್ರ ನನಗೆ ಹೇಳಿದ: 'ಮಹಾಶಯರೆ, ನಮ್ಮ ಆದರ್ಶಪುರುಷ ಜನಕರಾಜ. ಆತ ಈ ಸಂಸಾರದಲ್ಲಿ ನಿರ್ಲಿಪ್ತನಾಗಿ ಇದ್ದ. ನಾವೂ ಆತನ ಹಾಗೆಯೇ ಇರಲು ಪ್ರಯತ್ನಿಸುತ್ತೇವೆ.' ನಾನು ಹೇಳಿದೆ: 'ಸುಮ್ಮನೆ ಹಾಗೆ ಭಾವಿಸಿಕೊಂಡುಬಿಟ್ಟರೆ ಜನಕರಾಜನಂತಿರಲಾಗುವುದೆ? ಆತ ಎಷ್ಟೊಂದು ತಪಸ್ಸುಮಾಡಿ ಬ್ರಹ್ಮಜ್ಞಾನವನ್ನು ಪಡೆದುಕೊಂಡಿದ್ದ! ಶೀರ್ಷಾಸನದಲ್ಲಿ ಬಹಳ ವರ್ಷಗಳ ಕಾಲ ಘೋರ ತಪಸ್ಸು ಮಾಡಿ ಅನಂತರ ಬಂದು ಸಂಸಾರದಲ್ಲಿ ಇರಲಾರಂಭಿಸಿದ.'

ಹಾಗಾದರೆ ಸಂಸಾರಿಗಳಿಗೆ ಮಾರ್ಗವೇ ಇಲ್ಲ ಅಂತಲೇನು? ಅವಶ್ಯವಾಗಿ ಇದೆ. ಆಗಾಗ ಕೆಲವು ದಿನಗಳ ಮಟ್ಟಿಗೆ ನಿರ್ಜನಪ್ರದೇಶದಲ್ಲಿ ಸಾಧನೆಮಾಡಬೇಕು. ಆಗ ಭಕ್ತಿ ದೊರೆಯುತ್ತದೆ, ಜ್ಞಾನ ದೊರೆಯುತ್ತದೆ. ಬಳಿಕ ಹೋಗಿ ಸಂಸಾರದಲ್ಲಿ ಇದ್ದರೆ ಯಾವ ತೊಂದರೆಯೂ ಆಗದು. ನಿರ್ಜನ ಪ್ರದೇಶದಲ್ಲಿ ಸಾಧನೆಮಾಡುವಾಗ ಸಂಸಾರ ಸಂಬಂಧವನ್ನು ಸಂಪೂರ್ಣವಾಗಿ ತ್ಯಜಿಸಿಬಿಡಬೇಕು. ಹೆಂಡತಿ, ಮಗ, ಮಗಳು, ತಾಯಿ, ತಂದೆ, ಸೋದರ, ಸೋದರಿ, ಗೆಳೆಯರು, ಸ್ವಬಾಂಧವರು ಯಾರೂ ಹತ್ತಿರ ಸುಳಿಯದ ಹಾಗೆ ನೋಡಿಕೊಳ್ಳಬೇಕು. ಹಾಗೆ ಸಾಧನೆ ಮಾಡುವಾಗ ಭಾವಿಸಬೇಕು: 'ನನಗೆ ಈ ಜಗತ್ತಿನಲ್ಲಿ ಯಾರೆಂದರೆ ಯಾರೂ ಇಲ್ಲ. ಭಗವಂತನೇ ನನ್ನ ಸರ್ವಸ್ವ.' ಅಳುತ್ತ ಅಳುತ್ತ ಜ್ಞಾನಭಕ್ತಿಗಳಿಗಾಗಿ ಭಗವಂತನನ್ನು ಪ್ರಾರ್ಥಿಸಬೇಕು.

ಎಷ್ಟು ದಿನಗಳ ಮಟ್ಟಿಗೆ ಸಂಸಾರವನ್ನು ಬಿಟ್ಟುಹೋಗಿ ನಿರ್ಜನಪ್ರದೇಶದಲ್ಲಿ ಇರಬೇಕು ಎಂದು ನೀವು ಪ್ರಶ್ನಿಸುವುದಾದರೆ, ನನ್ನ ಉತ್ತರ, ಹಾಗೆ ಕೇವಲ ಒಂದು ದಿನವಿದ್ದರೂ ಶ್ರೇಯಸ್ಕರವಾದುದೆ. ಮೂರು ದಿನದ ಮಟ್ಟಿಗೆ ಇನ್ನೂ ಒಳ್ಳೆಯದೆ. ಸಾಧ್ಯವಾದರೆ ಹನ್ನೆರಡು ದಿನವನ್ನು, ಒಂದು ತಿಂಗಳನ್ನು, ಮೂರು ತಿಂಗಳನ್ನು, ಒಂದು ವರ್ಷವನ್ನು — ತಮ್ಮ ತಮ್ಮ ಅನುಕೂಲಕ್ಕೆ ತಕ್ಕಂತೆ, ಏಕಾಂತದಲ್ಲಿ ಕಳೆದು, ಜ್ಞಾನಭಕ್ತಿಗಳನ್ನು ಪಡೆದುಕೊಂಡು ಸಂಸಾರದಲ್ಲಿ ಬಂದು ಇದ್ದರೆ ವಿಶೇಷವಾಗೇನೂ ಹೆದರಬೇಕಾಗಿಲ್ಲ.

ಕೈಗೆ ಎಣ್ಣೆ ಸವರಿಕೊಂಡು ಹಲಸಿನಹಣ್ಣು ಬಿಡಿಸಿದರೆ ಅಂಟು ಕೈಗೆ ಅಂಟುವುದಿಲ್ಲ. ಕಣ್ಣುಮುಚ್ಚಾಲೆಯಾಟವಾಡುವಾಗ ಅಜ್ಜಿಯನ್ನು ಮುಟ್ಟಿಬಿಟ್ಟದ್ದೇ ಆದರೆ, ನಿಶ್ಚಿಂತೆಯಿಂದ ಇದ್ದುಬಿಡಬಹುದು. ಒಮ್ಮೆ ಸ್ಪರ್ಶಮಣಿಯನ್ನು ಮುಟ್ಟಿ ಚಿನ್ನವಾಗಿಬಿಡಿ. ಬಳಿಕ ನಿಮ್ಮನ್ನು ಒಂದು ಸಾವಿರ ವರ್ಷ ಮಣ್ಣಿನೊಳಗೆ ಹೂತಿಟ್ಟಿದ್ದು ಹೊರಕ್ಕೆ ತೆಗೆದರೂ ಚಿನ್ನವಾಗಿಯೇ ಉಳಿದಿರುತ್ತೀರಿ.

ಮನಸ್ಸು ಹಾಲು ಇದ್ದ ಹಾಗೆ. ಅದನ್ನು ಸಂಸಾರವೆಂಬ ನೀರಿಗೆ ಸುರಿದರೆ ಅದು ಅದರೊಡನೆ ಬೆರೆತುಕೊಂಡುಬಿಡುತ್ತದೆ. ಜನ ಹಾಲನ್ನು ನಿರ್ಜನಪ್ರದೇಶದಲ್ಲಿ ಇಟ್ಟು ಹೆಪ್ಪು ಹಾಕಿ ಮೊಸರುಮಾಡಿ ಕಡೆದು ಬೆಣ್ಣೆ ತೆಗೆಯುತ್ತಾರೆ. ಹಾಗೇನೇ ನಿರ್ಜನಪ್ರದೇಶದಲ್ಲಿ ಸಾಧನೆ ಮಾಡಿ ಮನಸ್ಸೆಂಬ ಹಾಲಿನಿಂದ ಜ್ಞಾನ-ಭಕ್ತಿಗಳೆಂಬ ಬೆಣ್ಣೆಯನ್ನು ತೆಗೆಯುವುದಾದರೆ, ಬಳಿಕ ಆ ಬೆಣ್ಣೆಯನ್ನು ಅನಾಯಾಸವಾಗಿ ಸಂಸಾರವೆಂಬ ನೀರಿನಲ್ಲಿ ಇಡಬಹುದು. ಆಗ ಅದು ಎಂದಿಗೂ ಸಂಸಾರವೆಂಬ ನೀರಿನಲ್ಲಿ ಬೆರೆತುಹೋಗುವುದಿಲ್ಲ – ಅದು ಅದರಲ್ಲಿ ನಿರ್ಲಿಪ್ತವಾಗಿ ತೇಲುತ್ತಿರುತ್ತದೆ.

ದೇಹ ಮತ್ತು ಆತ್ಮ! ದೇಹ ಹುಟ್ಟಿತು, ಸಾಯುತ್ತದೆ. ಆತ್ಮಕ್ಕೆ ಮೃತ್ಯುವಿಲ್ಲ. ಅದು ಹಣ್ಣಾದ ಅಡಕೆಯ ಹಾಗೆ. ಅಡಕೆ ಹಣ್ಣಾದಾಗ ಅದು ಸಿಪ್ಪೆಗೆ ಅಂಟಿಕೊಂಡಿರುವುದಿಲ್ಲ. ಆದರೆ ಅದು ಕಾಯಿಯಾಗಿರುವಾಗ ಅದನ್ನು ಸಿಪ್ಪೆಯಿಂದ ಬೇರ್ಪಡಿಸಬೇಕಾದರೆ ಬಹಳವಾಗಿ ಕಷ್ಟಪಡಬೇಕಾಗುತ್ತದೆ. ಭಗವಂತನ ಸಾಕ್ಷಾತ್ಕಾರ, ಭಗವಂತನ ದರ್ಶನ ದೊರೆತನಂತರ ದೇಹಬುದ್ಧಿ ಹೊರಟುಹೋಗುತ್ತದೆ. ಆಗ ದೇಹ ಪ್ರತ್ಯೇಕ, ಆತ್ಮ ಪ್ರತ್ಯೇಕ ಎಂಬ ಬೋಧೆಯಾಗುತ್ತದೆ.

ಸಾಧಕನ ಅವಸ್ಥೆಯಲ್ಲಿ 'ನೇತಿ' 'ನೇತಿ' ಮಾರ್ಗವನ್ನು ಅನುಸರಿಸಿ ಇಡೀ ಮನಸ್ಸನ್ನು ಭಗವಂತನ ಕಡೆ ತಿರುಗಿಸಬೇಕು. ಆದರೆ ಸಿದ್ಧನ ಅವಸ್ಥೆ ಬೇರೆ. ಭಗವಂತನ ಸಾಕ್ಷಾತ್ಕಾರ ದೊರೆತ ಮೇಲೆ ಅನುಲೋಮಮಾಡಿದುದನ್ನೆಲ್ಲ ವಿಲೋಮಮಾಡಬೇಕಾಗುತ್ತದೆ – ಎಂದರೆ, ತ್ಯಜಿಸಿದುದನ್ನೆಲ್ಲ ಸ್ವೀಕರಿಸಬೇಕಾಗುತ್ತದೆ.

ಮಜ್ಜಿಗೆಯನ್ನು ಪ್ರತ್ಯೇಕಿಸಿದರೆ ಬೆಣ್ಣೆ ದೊರೆಯುತ್ತದೆ. ಆಗ ಬೋಧೆಯಾಗುತ್ತದೆ, ಬೆಣ್ಣೆಗೂ ಮಜ್ಜಿಗೆಗೂ ಅನ್ಯೋನ್ಯ ಸಂಬಂಧವಿದೆ. ಅವೆರಡೂ ಒಂದೇ ವಸ್ತುವಿನಿಂದ ಬಂದಿದೆ. ಬೆಣ್ಣೆ ಮೂಲತಃ ಮಜ್ಜಿಗೆಯಿಂದ ಪ್ರತ್ಯೇಕವಲ್ಲ. ಹಾಗೆಯೇ ಮಜ್ಜಿಗೆಯೂ ಮೂಲತಃ ಬೆಣ್ಣೆಯಿಂದ ಪ್ರತ್ಯೇಕವಲ್ಲ ಎಂದು. ಭಗವಂತನ ಸಾಕ್ಷಾತ್ಕಾರ ದೊರೆತ ಮೇಲೆ ನಿರ್ದಿಷ್ಟ ಅನುಭವವಾಗುತ್ತದೆ, ಆತನೇ ಎಲ್ಲವೂ ಆಗಿದ್ದಾನೆ ಎಂಬುದಾಗಿ. ಕೆಲವದರಲ್ಲಿ ಕಡಮೆಯಾಗಿ, ಇನ್ನು ಕೆಲವದರಲ್ಲಿ ಹೆಚ್ಚಾಗಿ ವ್ಯಕ್ತವಾಗಿದ್ದಾನೆ, ಅಷ್ಟೆ.

ಶ್ರೀರಾಮಕೃಷ್ಣ ವಚನವೇದದಿಂದ